KABK200005742025

VIJAYAKUMAR KANNUR

Digitally signed by VIJAYAKUMAR KANNUR
Date: 2026.03.07 10:53:27 +0530

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುಧೋಳ

ಉಪಸ್ಥಿತರು: ಶ್ರೀ ವಿಜಯಕುಮಾರ.ಎಮ್.ಕನ್ನೂರ,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

ಅಪರಾಧಿಕ ಪ್ರಕರಣ ಸಂಖ್ಯೆ. **213/2025**

ದಿನಾಂಕ ***6***ನೇ ಮಾರ್ಚ **2026**

1. ಶ್ರೀ.ಸದಾಶಿವ ತಂದೆ ಲಕ್ಕಪ್ಪ ಕರೋಲಿ,
ವಯಾಃ 28 ವರ್ಷ, ಉಃ ವ್ಯಾಪಾರ,
ಸಾಃ ಜಂಬಗಿ ಕೆ.ಡಿ, ತಾಃ ಮುಧೋಳ,
ಜಿಃ ಬಾಗಲಕೋಟ.

...... ಫಿರ್ಯಾದಿ

(ಶ್ರೀ. ಜೆ.ಬಿ.ಎನ್., ನ್ಯಾಯವಾದಿಗಳು)

**ಃ ವಿರುದ್ಧ ಃ**

1. ಶ್ರೀ.ಅಶೋಕ ತಂದೆ ಶಿವಪ್ಪ ರಾಮದುರ್ಗ,
ವಯಾಃ 40 ವರ್ಷ, ಉಃ ಗ್ಯಾಂಗಮನ್,
ಸಾಃ ಜಂಬಗಿ ಕೆ.ಡಿ, ತಾಃ ಮುಧೋಳ,
ಜಿಃ ಬಾಗಲಕೋಟ,
ಮೋ ನಂ.8792442282/9743857956

....... ಆರೋಪಿ

(ಶ್ರೀ. ಸಿ.ಎಚ್.ಡಿ. ನ್ಯಾಯವಾದಿಗಳು)

| | | |
|---|---|---|
| ಫಿರ್ಯಾದಿ ದಾಖಲು ಮಾಡಿದ ದಿನಾಂಕ | : | 20.03.2025 |
| ಆರೋಪಗಳು | : | ವರ್ಗಾವಣಿಯ ಲಿಖಿತಗಳ ಅಧಿನಿಯಮ ಕಲಂ.138 ಮತ್ತು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.223. |
| ಸಾಕ್ಷಿಗಳ ವಿಚಾರಣೆ ಪ್ರಾರಂಭವಾದ ದಿನಾಂಕ | : | 20.03.2025 |
| ತೀರ್ಪು ನೀಡಿದ ದಿನಾಂಕ | : | 06.03.2026 |
| ತೀರ್ಮಾನ | : | ಅಂತಿಮ ಆಜ್ಞೆಯಂತೆ |

(ವಿಜಯಕುಮಾರ ಎಮ್ ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.

## :: ತೀರ್ಪು ::

ಫಿರ್ಯಾದಿಯು ಆರೋಪಿಯ ವಿರುದ್ಧ ಲಿಖಿತ ವರ್ಗಾವಣೀಯ ಅಧಿನಿಯಮ 1881 ಕಲಂ.138 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿದ್ದು ಅಂತಾ ಹೇಳಿ ತನಗೆ ಆರೋಪಿಯು ಕೊಡಬೇಕಾದ ರೂ.3,00,000/- ಗಳನ್ನು ಒದಗಿಸಿಕೊಡಬೇಕೆಂದು ಮತ್ತು ಆರೋಪಿಗೆ ಯೋಗ್ಯ ದಂಡ ಶಿಕ್ಷೆಯನ್ನು ವಿಧಿಸಬೇಕೆಂದು ಕೋರಿ ಹಾಗೂ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 223 ರಡಿಯಲ್ಲಿ ಈ ದೂರು ಸಲ್ಲಿಸಿರುತ್ತಾರೆ.

## ಪಿರ್ಯಾದಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇದೆ

**2.** ಆರೋಪಿಯು ಮತ್ತು ಪಿರ್ಯಾದಿದಾರ ಒಬ್ಬರಿಗೊಬ್ಬರು ಪರಿಚಯಸ್ಥರು ಹಾಗೂ ವಿಶ್ವಾಸಿಕರು ಇರುತ್ತಾರೆ. ಆರೋಪಿಯು 2024 ನೇ ಸಾಲಿನ ಅಕ್ಟೋಬರ ತಿಂಗಳ 2 ನೇ ವಾರದಲ್ಲಿ ಫಿರ್ಯಾದಿದಾರನನ್ನು ಭೇಟಿಯಾಗಿ ತಾನು ಹೊಂದಿರುವ ಕಬ್ಬು ಕಡಿಯುವ ಗ್ಯಾಂಗಿನವರಿಗೆ ಹಾಗೂ

ತನ್ನ ಪ್ರಾಪಂಚಿಕ ಅಡಚಣೆಗೋಸ್ಕರ ರೂ.3,00,000/- ಗಳ ಕೈಗಡ ಸಾಲವನ್ನು ನೀಡುವಂತೆ ಕೇಳಿದ್ದು, ಫಿರ್ಯಾದಿದಾರನು ಆರೋಪಿತನಿಗೆ 2024 ನೇ ಸಾಲಿನ ಅಕ್ಟೋಬರ ತಿಂಗಳ ಕೊನೆಯ ವಾರದಲ್ಲಿ ರೂ.3,00,000/- ಗಳ ಸಾಲವನ್ನು ನೀಡಿರುವರು. ಸದರಿ ಸಾಲದ ಹಣವನ್ನು ಆರೋಪಿಯು ಮೂರು ತಿಂಗಳ ಒಳಗಾಗಿ ಮರುಪಾವತಿಸುವುದಾಗಿ ಒಪ್ಪಿಕೊಂಡಿರುವರು. ಆದರೆ ಆರೋಪಿಯು ಸಾಲವನ್ನು ನಿಗದಿತ ಕಾಲಾವಧಿಯಲ್ಲಿ ಮರುಪಾವತಿಸಿರುವುದಿಲ್ಲ. ಆದ್ದರಿಂದ ಫಿರ್ಯಾದಿಯು ಆರೋಪಿಗೆ ಈ ಹಣ ನೀಡುವಂತೆ ಕೇಳಿದಾಗ ಆರೋಪಿಯು ದಿನಾಂಕ: 03.02.2025 ರಂದು ರೂ.3,00,000/- ಮೊತ್ತದ ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕ್ ಚಿಂಚಖಂಡಿ ಕೆ.ಡಿ ಶಾಖೆಯ ಚೆಕ್ ನಂ.011337 ಅಂತಾ ನಮೂದಿಸಿ ಆ ಚೆಕ್ಕನ್ನು ನೀಡಿರುವನು. ನಂತರ ಫಿರ್ಯಾಧಿಯು ಸದರಿ ಚೆಕ್ಕನ್ನು ತಮ್ಮ ಬ್ಯಾಂಕರಾದ ಯುನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ: ಮುಧೋಳ ಕ್ಕೆ ನಗದೀಕರಣದ ಸಲುವಾಗಿ ನೀಡಿದಾಗ ಚೆಕ್ಕು ನಗದೀಕರಣವಾಗದೇ ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲ ಎಂಬ ಹಿಂಬರಹದೊಂದಿಗೆ ಬ್ಯಾಂಕಿನವರು ದಿನಾಂಕ: 05.02.2025 ರಂದು ಚೆಕ್ಕನ್ನು ಮರಳಿ ಕೊಟ್ಟಿದ್ದು, ನಂತರ ದಿನಾಂಕ: 12.02.2025 ರಂದು ಫಿರ್ಯಾದಿದಾರನು ವಕೀಲರ ಮುಖಾಂತರ ಆರೋಪಿಗೆ ನೊಂದಾಯಿತ ಅಂಚೆಯ ಮೂಲಕ ನೋಟಿಸನ್ನು ಕಳುಹಿಸಿದ್ದು, ಸದರಿ ನೋಟೀಸು ದಿನಾಂಕ: 21.02.2025 ರಂದು ಆರೋಪಿಗೆ ಜಾರಿಯಾಗಿರುವುದು. ಆರೋಪಿ ತನ್ನ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲದೇ ಇದ್ದರೂ ಫಿರ್ಯಾದಿಗೆ ಮೋಸ ಮಾಡುವ ಸಲುವಾಗಿ ಚೆಕ್ಕನ್ನು ನೀಡಿರುವುದರಿಂದ ಆರೋಪಿಯ ವಿರುದ್ದ ಲಿಖಿತ ವರ್ಗಾವಣೀಯ ಅಧಿನಿಯಮ ಕಲಂ.138 ರಡಿಯಲ್ಲಿ ಕಾನೂನು ಕ್ರಮ ಜರುಗಿಸಿ ಶಿಕ್ಷಿಸಬೇಕೆಂದು ಪಿರ್ಯಾದಿದಾರರು ಪ್ರಾರ್ಥಿಸಿರುತ್ತಾರೆ.

**3.** ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 223 ರಡಿಯಲ್ಲಿ ಈ ನ್ಯಾಯಾಲಯವು ಸಂಜ್ಞೆಯನ್ನು ತೆಗೆದುಕೊಂಡು ನಂತರ ಫಿರ್ಯಾದಿದಾರ ಪ್ರಮಾಣಪೂರ್ವಕ ಹೇಳಿಕೆಯನ್ನು ದಾಖಲು ಮಾಡಿಕೊಂಡು ಪ್ರಕರಣವನ್ನು ನೋಂದಣಿ ಮಾಡಿ ಆರೋಪಿಗೆ ಸಮನ್ಸ್ ಕಳುಹಿಸಿ ಅದಕ್ಕನುಗುಣವಾಗಿ ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನು ಪಡೆದುಕೊಂಡಿರುತ್ತಾನೆ. ನಂತರ ಈ ನ್ಯಾಯಾಲಯವು ಆಪಾದನೆಯನ್ನು ರಚಿಸಿ

ಆರೋಪಿಗೆ ಓದಿ ಹೇಳಲಾಗಿ ಆರೋಪಿಯು ತನ್ನ ಮೇಲಿನ ಸಾಕ್ಷಿಯನ್ನು ಸುಳ್ಳು ಅಂತಾ ಅಲ್ಲಗಳೆದಿರುತ್ತಾನೆ.

**4.** ಫಿರ್ಯಾದಿದಾರರು ತನ್ನ ಪ್ರಕರಣಕ್ಕೆ ಪೂರಕವಾಗಿ ತನ್ನನ್ನು ಪಿಡಬ್ಲ್ಯೂ-1 ಅಂತಾ ವಿಚಾರಣೆಗೊಳಪಡಿಸಿಕೊಂಡು ಒಟ್ಟು 5 ದಾಖಲೆಗಳನ್ನು ನಿಪಿ-1 ರಿಂದ ನಿಪಿ-5 ಅಂತಾ ಗುರುತಿಸಿಕೊಂಡಿರುವರು. ಆರೋಪಿತನನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.351 ರಡಿಯಲ್ಲಿ ಪ್ರಶ್ನಿಸಿದಾಗ ತನ್ನ ಮೇಲಿನ ಸಾಕ್ಷ್ಯವನ್ನು ಅಲ್ಲಗಳೆದಿರುವನು.

**5.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಕೇಳಲಾಯಿತು.

**6.** ಈ ಪ್ರಕರಣದ ವಸ್ತು ಸ್ಥಿತಿ ಹಾಗೂ ಸಂದರ್ಭವನ್ನು ಪರಿಶೀಲಿಸಿ ನಂತರ ಈ ಕೆಳಗಿನ ಅಂಶಗಳು ತೀರ್ಮಾನಕ್ಕಾಗಿ ಉದ್ಭವವಾದವು.

ಅಂಶಗಳು

1. ಫಿರ್ಯಾದಿಯು ಆರೋಪಿಗೆ ರೂ.3,00,000/- ಗಳ ಹಣವನ್ನು ಆರೋಪಿಗೆ ಸಾಲವಾಗಿ ನೀಡಿದ್ದು, ನಂತರ ಸದರಿ ಹಣವನ್ನು ಮರುಪಾವತಿ ಮಾಡಲು ದಿನಾಂಕ: 03.02.2025 ರಂದು ರೂ.3,00,000/- ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕ ಚಿಂಚಖಂಡಿ ಕೆ.ಡಿ ಶಾಖೆಯ ಚೆಕ್ ನಂ.011337 ಅನ್ನು ನೀಡಿದ್ದಾನೆ ಎಂಬುದನ್ನು ಫಿರ್ಯಾದಿದಾರನು ರುಜುವಾತುಪಡಿಸುವರೇ ?
2. ಫಿರ್ಯಾದಿದಾರನು ಆರೋಪಿ ತನಗೆ ಕಾನೂನುಬದ್ಧವಾದ ಸಾಲ ಸಂದಾಯ ಮಾಡುವ ಹೊಣೆಗಾರಿಕೆಯನ್ನು ಹೊಂದಿರುವನು ಎಂಬುದನ್ನು ಫಿರ್ಯಾದಿದಾರನು ರುಜುವಾತುಪಡಿಸುವರೇ ?
3. ಲಿಖಿತ ವರ್ಗಾವಣೀಯ ಅಧಿನಿಯಮ ಕಲಂ.138 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಆರೋಪಿಯು ಎಸಗಿರುವನೆಂದು ಫಿರ್ಯಾದಿದಾರನು ಸಾಬೀತುಪಡಿಸುವರೇ?
4. ಯಾವ ಆದೇಶ?

**7.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರ **:**

ಅಂಶ ನಂ.1 **:** ಸಕಾರಾತ್ಮಕವಾಗಿ

ಅಂಶ ನಂ.2 **:** ಸಕಾರಾತ್ಮಕವಾಗಿ

ಅಂಶ ನಂ.3 **:** ಸಕಾರಾತ್ಮಕವಾಗಿ

ಅಂಶ ನಂ.4 **:** ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ...

**–: ಕಾ ರ ಣ ಗ ಳು :–**

**8.** **ಅಂಶ ನಂ. 1 ರಿಂದ 3 ಕ್ಕೆ ನೀಡಿರುವ ಉತ್ತರಕ್ಕೆ ಕಾರಣಗಳು:** ಈ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ನ್ಯಾಯಾಲಯದ ಮುಂದೆ ಉಭಯ ಪಕ್ಷಗಾರರು ಹಾಜರುಪಡಿಸಿದ ಸಕಲ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ವರ್ಗಾವಣೆ ಲಿಖಿತ ಅಧಿನಿಯಮದ ಕಲಂ 138 ರಡಿಯಲ್ಲಿ ಅಪರಾಧವನ್ನು ಸಾಬೀತುಪಡಿಸಬೇಕಾದರೆ ಪಿರ್ಯಾದಿದಾರರು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗಿರುತ್ತದೆ.

*1.* ಯಾವುದೇ ಋಣ ಅಥವಾ ಇತರ ಹೊಣೆಗಾರಿಕೆಯನ್ನು ಪೂರ್ಣವಾಗಿ ಅಥವಾ ಬಾಗಶಃ ತೀರಿಸುವುದಕ್ಕಾಗಿ ಒಬ್ಬ ವ್ಯಕ್ತಿಯು, ಒಂದು ಬ್ಯಾಂಕನಲ್ಲಿ ತಾನು ಇಟ್ಟ ಖಾತೆಯಿಂದ ಯಾವುದೇ ಮೊಬಲಗನ್ನು ಇನ್ನೊಬ್ಬ ವ್ಯಕ್ತಿಗೆ ಸಂದಾಯ ಮಾಡುವುದಕ್ಕಾಗಿ ಬರೆದ ಯಾವುದೇ ಚೆಕ್ಕನ್ನು ಆ ಖಾತೆಯಲ್ಲಿ ಜಮೆ ಇರುವ ಮೊಬಲಗು ಸಾಕಷ್ಟಿಲ್ಲದಿರುವ ಅಥವಾ ಅದು ಆ ಬ್ಯಾಂಕಿನೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಆ ಖಾತೆಯಿಂದ ಸಂದಾಯ ಮಾಡಲು ವ್ಯವಸ್ಥೆ ಮಾಡಿರುವ ಮೊಬಲಗನ್ನು ಮೀರಿರುವ ಕಾರಣದಿಂದಾಗಿ ಬ್ಯಾಂಕ್ ಸಂದಾಯ

ಮಾಡದೇ ಹಿಂದಿರುಗಿಸುವಲ್ಲಿ ಅಂಥ ವ್ಯಕ್ತಿಯು ಅಪರಾಧವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು ಅಂತ ಇರುತ್ತದೆ.

*2.* ಚೆಕ್ಕನ್ನು ಬರೆದ ದಿನಾಂಕದಿಂದ *3* ತಿಂಗಳ ಅವಧಿಯ ಒಳಗಾಗಿ ಅಥವಾ ಅದರ ಸಿಂಧುತ್ವದ ಅವಧಿಯೊಳಗೆ ಇವುಗಳಲ್ಲಿ ಯಾವುದು ಮುಂಚಿತವೋ ಆ ಅವಧಿಯೊಳಗೆ ಬ್ಯಾಂಕಿಗೆ ಅದನ್ನು ಹಾಜರುಪಡಿಸಬೇಕು.

*3.* ಸಂದರ್ಭಾನುಸಾರ, ಸ್ವೀಕರ್ತನು ಅಥವಾ ಆ ಚೆಕ್ಕಿನ ತರುವಾಯದ ಧಾರಕನು ಸಂದಾಯ ಮಾಡದೇ ಚೆಕ್ಕನ್ನು ಹಿಂದುರುಗಿಸಿರುವ ಬಗ್ಗೆ ಬ್ಯಾಂಕಿನಿಂದ ಮಾಹಿತಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ (ತಿದ್ದುಪಡಿ ಅಧಿನಿಯಮದ ಪ್ರಕಾರ *30* ದಿವಸಗಳ ಒಳಗೆ) ಚೆಕ್ಕು ಬರೆದವನಿಗೆ ಬರವಣಿಗೆಯಲ್ಲಿ ನೋಟಿಸನ್ನು ಕೊಡುವ ಮೂಲಕ ಸದರಿ ಮೊಬಲಗನ್ನು ಸಂದಾಯ ಮಾಡುವಂತೆ ತಗಾದೆ ಮಾಡಬೇಕು.

*4.* ಅಂತಹ ಚೆಕ್ಕನ್ನು ಬರೆದವರನ್ನು ಸದರಿ ನೋಟಿಸನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗೆ ಸ್ವೀಕೃತನಿಗೆ ಅಥವಾ ಸಂದರ್ಭಾನುಸಾರ ಆ ಚೆಕ್ಕಿನ ತರುವಾಯದ ಧಾರಕನಿಗೆ ಸದರಿ ಮೊಬಲಗನ್ನು ಸಂದಾಯ ಮಾಡಲು ತಪ್ಪಿರಬೇಕು.

*5.* ಆರೋಪಿಗೆ ನೋಟಿಸು ತಲುಪಿದ ನಂತರ ನೋಟಿಸು ತಲುಪಿದ ದಿನಾಂಕದಿಂದ *15* ದಿವಸಗಳ ಒಳಗಾಗಿ ಚೆಕ್ಕಿನ ಹಣವನ್ನು ಕೊಡಬೇಕು. ಆ ರೀತಿ ಚೆಕ್ಕಿನ ಹಣ ಕೊಡದೇ ಇದ್ದಲ್ಲಿ ನಂತರ ಒಂದು ತಿಂಗಳ ಒಳಗಾಗಿ ಫಿರ್ಯಾದಿಯನ್ನು ದಾಖಲು ಮಾಡಬೇಕು.

*6.* ವರ್ಗಾವಣೆ ಲಿಖಿತ ಅಧಿನಿಯಮದ ಕಲಂ *138* ರಡಿಯಲ್ಲಿ ಪ್ರಕರಣದ ಉದ್ದೇಶಗಳಿಗಾಗಿ ‘ ಋಣ ಅಥವಾ ಇತರೆ

ಹೊಣೆಗಾರಿಕೆ ’ ಎಂದರೆ ಕಾನೂನಿನಿಂದ ಜಾರಿಗೊಳಿಸಬಹುದಾದ ಋಣ ಅಥವಾ ಇತರೆ ಹೊಣೆಗಾರಿಕೆಯಾಗಿರುತ್ತದೆ.

**9.** ಫಿರ್ಯಾದಿದಾರನು ತನಗೆ ಆರೋಪಿ ಚೆಕ್ಕನ್ನು ಕೊಟ್ಟಿರುತ್ತಾನೆಂದು ಪಿರ್ಯಾದಿಯಲ್ಲಿ ಆರೋಪಿಸಿರುವುದನ್ನು ಸಾಬೀತುಪಡಿಸಲು ಚೆಕ್ಕನ್ನು ಹಾಜರುಪಡಿಸಿ ಅದನ್ನು ನಿಪಿ–1 ಎಂದು ಹಾಗೂ ಆರೋಪಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಿಕೊಂಡಿರುವರು. ನಿಪಿ–1 ನ್ನು ಅವಲೋಕಿಸಿದಾಗ ದಿನಾಂಕ. 03.02.2025 ರಂದು ಆರೋಪಿಯು ಪಿರ್ಯಾದಿಯ ಹೆಸರಿನಲ್ಲಿ ರೂ.3,00,000/- ರೂಪಾಯಿಗಳ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಚಿಂಚಖಂಡಿ ಕೆ.ಡಿ ಶಾಖೆಗೆ ಸಂಬಂಧಪಟ್ಟಂತಹ ಚೆಕ್ಕನ್ನು ಕೊಟ್ಟಿರುವುದು ಕಂಡುಬರುತ್ತದೆ ಮತ್ತು ಸದರಿ ಚೆಕ್ಕನ್ನು ಪಿರ್ಯಾದಿದಾರ ತಮ್ಮ ಬ್ಯಾಂಕರಾದ ಬ್ಯಾಂಕ್ ಆಫ್ ಇಂಡಿಯಾ ಮುಧೋಳ ಶಾಖೆಯಲ್ಲಿ ನಗದೀಕರಣಕ್ಕೆ ಸಲ್ಲಿಸಿದ್ದು, ಸದರಿ ಚೆಕ್ ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲ ಎಂಬ ಕಾರಣದಿಂದ ನಗದೀಕರಣವಾದೇ ವಾಪಸ್ಸು ಬಂದಿದ್ದು ಮತ್ತು ಆ ಕುರಿತಂತೆ ಯನಿಯನ್ ಬ್ಯಾಂಕ ಆಫ್ ಇಂಡಿಯಾ ಮುಧೋಳ ಶಾಖೆಯವರು ದಿನಾಂಕ: 05.02.2025 ರಂದು ನಿಪಿ–2 ರಂತೆ ಹಿಂಬರಹವನ್ನು ಕೊಟ್ಟಿರುವುದು ಕಂಡುಬರುತ್ತದೆ. ಪಿರ್ಯಾದಿದಾರನು ಆರೋಪಿಗೆ ಚೆಕ್ಕನ ಮೊತ್ತವನ್ನು ಹಿಂದಿರುಗಿಸಬೇಕೆಂದು ನೋಟಿಸನ್ನು ದಿನಾಂಕ: 05.02.2025 ರಂದು ಕೊಟ್ಟಿರುವುದು ನಿಪಿ–3 ಎಂದು, ಈ ನೋಟಿಸು ಕಳುಹಿಸಿಕೊಟ್ಟ ನೊಂದಾಯಿತ ಅಂಚೆಯ ರಶೀದಿಯನ್ನು ನಿಪಿ–4 ಎಂದು, ಮರಳಿ ಬಂದ ಅಂಚೆಯ ಲಕೋಟೆಯನ್ನು ನಿಪಿ–5 ಎಂದು, ಲಕೋಟಿಯಲ್ಲಿರುವ ನೋಟಿಸನ್ನು ನಿಪಿ–5 ಎ ಎಂದು ಗುರುತಿಸಿಕೊಂಡಿರುವರು.

**10.** ಸಾಕಷ್ಟು ಕಾಲವಕಾಶವನ್ನು ನೀಡಿದರೂ ಸಹ ಆರೋಪಿ ಪರ ವಕೀಲರು ಪಿ.ಡಬ್ಲ್ಯೂ–1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ.

**11.** ಆರೋಪಿಯು ಈ ದೂರಿನಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನು ಅಲ್ಲಗಳೆದಿರುವನು. ಆದರೆ ಆರೋಪಿ ಪರ ವಕೀಲರು ಪಿಡಬ್ಲ್ಯು–1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿಕೊಂಡಿರುವುದಿಲ್ಲ. ಈ ಪ್ರಕರಣ ದಾಖಲು ಮಾಡುವ ಪೂರ್ವದಲ್ಲಿ ದೂರುದಾರ ಸಂಸ್ಥೆಯವರು ನಿಪಿ–3 ರಂತೆ ದಿನಾಂಕ: 12.02.2025 ರಂದು ನೊಂದಾಯಿತ ಅಂಚೆ ಮೂಲಕ ನೋಟಿಸು ನೀಡಿದ್ದು, ಸದರಿ ನೋಟಿಸು ಆರೋಪಿತನಿಗೆ ಜಾರಿಯಾಗಿರುವುದು. ಆದ್ದರಿಂದ ನಿಪಿ–1 ರ ಚೆಕ್ಕು ಆರೋಪಿಗೆ ಸಂಬಂಧಪಟ್ಟಿರುವುದರಿಂದ, ರೂ.3,00,000/- ಗಳ ಹಣವನ್ನು ಸಂದಾಯ ಮಾಡುವುದಕ್ಕಾಗಿ ನೀಡಿರುವನು ಎಂಬುದನ್ನು ದೂರುದಾರರು ರುಜುವಾತುಪಡಿಸಿರುವರು.

**12.** ಆರೋಪಿಯು ನಿಪಿ–1 ತನಗೆ ಸಂಬಂಧಪಟ್ಟಿರುವುದು ಎಂಬುದನ್ನು ಮತ್ತು ನಿಪಿ–1(ಎ) ಸಹಿಯು ತನ್ನದಲ್ಲ ಎಂಬುದನ್ನು ರುಜುವಾತು ಪಡಿಸಲು ವಿಫಲನಾಗಿರುವುದರಿಂದ ಲಿಖಿತ ವರ್ಗಾವಣೀಯ ಅಧಿನಿಯಮ ಕಲಂ.139 ರಡಿಯಲ್ಲಿ ಪಿರ್ಯಾದಿದಾರನ ಪರವಾಗಿ ಕಾನೂನುಬದ್ಧವಾಗಿ ಜಾರಿಗೊಳಿಸಬಹುದಾಂತಹ ಋಣ ಇತ್ತೇಂದು ಜಾರಿಗೋಳಿಸಬಹುದಾದಂತಹ ಋಣ ಇತ್ತೇಂದು ಪೂರ್ವಭಾವನೆಯನ್ನು ಮಾಡಬಹುದಾಗಿದೆ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದರಿತ ಪ್ರಕರಣ ಎಐಆರ್ 2010 ಎಸ್.ಸಿ 1898 (ಬಿ) (ರಂಗಪ್ಪ ವಿರುದ್ಧ ಮೋಹನ) ಸದರಿ ಪ್ರಕರಣದ ಮುಖ್ಯಾಂಶ ಕೆಳಕಂಡತಿದೆ.

Negotiable Instrument Act - Sec.138 – Existence of legally recoverable debt or liability – Is a matter of presumption u/sec.139

ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ತೀರ್ಪುಜನ್ಯ ಕಾನೂನಾದ **(2023) 10** ಎಸ್ ಸಿ ಸಿ **148 (**ರಾಜೇಶ ಜೈನ ವಿರುದ್ಧ ಅಜಯ ಸಿಂಗ್**)** ತೀರ್ಪಿನಲ್ಲಿ ಈ ಕೆಳಗಿನಂತೆ ಹೇಳಿರುವರು**.**

**"A. Debt, Financial and Monetary Laws- Negotiable Instruments Act, 1881- S.138 r/w Ss.118 and 139 – Loan transaction – Presumption under Ss 118 and 139, when there is no dispute over execution of cheque – When arises – Nature of evidence based on which such presumption may be raised – Approach and focus of the court once such presumption is successfully raised by complainant/prosecution – Whether accused has rebutted such presumption under S.139 – Determination of – Standard of proof required to rebut the presumption – Law summarised."**

**13.** ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣದ ತತ್ವದಂತೆ ಲಿಖಿತ ವರ್ಗಾವಣೆಯ ಅಧಿನಿಯಮ ಕಲಂ. 139 ರಡಿಯಲ್ಲಿ ಫಿರ್ಯಾದಿದಾರನ ಪರವಾಗಿ ಪೂರ್ವಭಾವನೆ ಮಾಡಬಹುದಾಗಿದೆ. ಆರೋಪಿಯು ನಿಪಿ-1 ಚೆಕ್ಕ ತನಗೆ ಸಂಬಂದಪಟ್ಟ ಚೆಕ್ಕ ಆಗಿರುತ್ತದೆ ಎಂದು ಹೇಳಿರುವುದರಿಂದ ವರ್ಗಾವಣೆಯ ಅಧಿನಿಯಮ ಕಲಂ.139 ರಡಿಯಲ್ಲಿ ಕಾನೂನುಬದ್ದವಾಗಿ ಜಾರಿಗೊಳಿಸಬಹುದಾದ ಋಣ ಇತ್ತೆಂದು ಫಿರ್ಯಾದಿದಾರನ ಪರವಾಗಿ ಪೂರ್ವಭಾವನೆ ಮಾಡಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ಆರೋಪಿಯು ದಿ: 25.10.2025

ರಂದು ಜಂಟಿ ಮೆಮೋವನ್ನು ಸಲ್ಲಿಸಿ ಆರೋಪಿ ಮತ್ತು ಪಿರ್ಯಾದಿದಾರ ಅಪಸಾತ ಆದ ಪ್ರಕಾರ ಆರೋಪಿಯು ಪಿರ್ಯಾದಿದಾರನಿಗೆ ರೂ.2,00,000/– ಗಳನ್ನು ಮರು ಸಂದಾಯ ಮಾಡುವುದಾಗಿ ಎಂದು ಒಪ್ಪಿ ಆರೋಪಿ ಮತ್ತು ದೂರುದಾರ ಕೂಡಿಕೊಂಡು ಈ ಜಂಟಿ ಮೆಮೋವನ್ನು ಸಲ್ಲಿಸಿರುವರು. ಅದೇ ರೀತಿ ಈ ಜಂಟಿ ಮೆಮೋ ಪ್ರಕಾರ ಆರೋಪಿಯು ದಿ: 22.11.2025 ರಂದು ರೂ. 10,000/–, ದಿ: 05.01.2026 ರಂದು ರೂ.30,000/– ಮತ್ತು ದಿನಾಂಕ: 09.02.2026 ರಂದು ರೂ.40,000/– ಗಳನ್ನು ಹೀಗೆ ಒಟ್ಟು ರೂ.80,000/– ಗಳನ್ನು ದೂರುದಾರನಿಗೆ ಪಾವತಿ ಮಾಡಿರುವರು. ನಂತರ ದಿ: 25.10.2025 ರ ಜಂಟಿ ಮೆಮೋದ ಪ್ರಕಾರ ಹಣವನ್ನು ಸಂದಾಯ ಮಾಡಿರುವುದಿಲ್ಲ ಮತ್ತು ಆತ ಈ ನ್ಯಾಯಾಲಯಕ್ಕೆ ಸಹ ಹಾಜರಾಗಿರುವುದಿಲ್ಲ. ಆದ್ದರಿಂದ ಆರೋಪಿಯು ತಾನು ನೀಡಿರುವ ಚೆಕ್ ನ ಮೊತ್ತವನ್ನು ಒಪ್ಪಿಕೊಂಡಿರುವುದರಿಂದ ಈ ಜಂಟಿ ಮೆಮೋದ ಪ್ರಕಾರ ನಡೆದುಕೊಳ್ಳದೇ ಇರುವುದರಿಂದ ಕಾನೂನು ಬದ್ಧವಾದ ಋಣದ ಮರುಸಂದಾಯಕ್ಕಾಗಿ ನಿಪಿ–1 ರ ಚೆಕ್ ನ್ನು ನೀಡಿರುವುದರಿಂದ ಪಿರ್ಯಾದಿದಾರ ತಮ್ಮ ಮೌಖಿಕ ದಾಖಲಾತಿಯ ಸಾಕ್ಷಿಯಿಂದ ಸಂಶಯಾತೀತವಾಗಿ ರುಜುವಾತುಪಡಿಸಿರುತ್ತಾರೆ. ಆದ್ದರಿಂದ ಅಂಶ ನಂ.**1** ರಿಂದ **3** ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**14.** ಅಂಶ **4 :** ಮೇಲೆ ಹೇಳಿದ ಕಾರಣಗಳಿಗಾಗಿ ಮತ್ತು ಪ್ರಕರಣದ ವಸ್ತುಸ್ಥಿತಿ ಮತ್ತು ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಈ ಕೆಳಕಂಡಂತೆ:

## ಆದೇಶ

ಭಾ.ನಾ.ಸು.ಸಂ. ಕಲಂ.232(2) ರಡಿಯಲ್ಲಿ ಆರೋಪಿತನು ಲಿಖಿತ ವರ್ಗಾವಣೀಯ ಅಧಿನಿಯಮ 1881 ಕಲಂ 138 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾನೆಂದು ನಿರ್ಣಯಿಸಿ ಅವರಿಗೆ ರೂ.1,21,000/- ಗಳನ್ನು ದಂಡ ವಿಧಿಸಲಾಗಿದೆ. ದಂಡದ ಹಣ ತಪ್ಪಿದಲ್ಲಿ ಆರೋಪಿತನು 3 ತಿಂಗಳ ಸಾದಾ ಸ್ವರೂಪದ ಜೈಲು ಶಿಕ್ಷೆಯನ್ನು ಅನುಭವಿಸತಕ್ಕದ್ದು.

ಭಾ.ನಾ.ಸು.ಸಂ. ಕಲಂ.395(1) ರಡಿಯಲ್ಲಿ ರೂ.1,20,000/- ರೂಪಾಯಿಗಳನ್ನು ದೂರುದಾರನಿಗೆ ಪರಿಹಾರ ಧನವೆಂದು ಮಂಜೂರು ಮಾಡಿದ್ದೇನೆ. ಬಾಕಿ ಉಳಿದ ರೂ.1,000/– ಗಳು ಸರ್ಕಾರಕ್ಕೆ ಜಮೆ ಮಾಡಿಕೊಳ್ಳತಕ್ಕದ್ದು.

ಈ ಪ್ರಕರಣದಲ್ಲಿ ಆರೋಪಿತನು ಮತ್ತು ಜಾಮೀನುದಾರ ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ರದ್ದು ಪಡಿಸಲಾಗಿದೆ.

ಆರೋಪಿತನಿಗೆ ತೀರ್ಪಿನ ದೃಢೀಕೃತ ನಕಲನ್ನು ಉಚಿತವಾಗಿ ನೀಡತಕ್ಕದ್ದು.

(ನನ್ನ ಉಕ್ತ ಲೇಖನದಂತೆ ಶೀಘ್ರಲಿಪಿಗಾರರು ಬೆರಳಚ್ಚು ಮಾಡಿದ ನಂತರ ಅದನ್ನು ಓದಿ ತಪ್ಪುಗಳನ್ನು ತಿದ್ದಿದ ನಂತರ ತೆರೆದ ನ್ಯಾಯಾಲಯದಲ್ಲಿ ಈ ದಿನ ದಿನಾಂಕ: **6 ನೇ** ಮಾರ್ಚ **2026** ರಂದು ಘೋಷಿಸಲಾಯಿತು)

(ವಿಜಯಕುಮಾರ.ಮ.ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂ.ಗಳು ಮುಧೋಳ.

**:: ಅನುಸೂಚಿ ::**

1. ಫಿರ್ಯಾದಿ ಪರ ಸಾಕ್ಷಿದಾರರ ಪಟ್ಟಿ:

ಪಿ.ಡಬ್ಲ್ಯೂ-1 : ಶ್ರೀ.ಸದಾಶಿವ ತಂದೆ ಲಕ್ಕಪ್ಪ ಕರೋಲಿ

2. ಅಭಿಯೋಜನೆ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ:

| | | |
|---|---|---|
| ನಿಪಿ-1 | : | ಚೆಕ್ಕು |
| ನಿಪಿ-1(ಎ) | : | ಆರೋಪಿಯ ಸಹಿ |
| ನಿಪಿ-2 | : | ಬ್ಯಾಂಕ್ ಹಿಂಬರಹ |
| ನಿಪಿ-3 | : | ನೋಟೀಸು |
| ನಿಪಿ-4 | : | ಅಂಚೆ ರಶೀದಿ |

ನಿಪಿ-5 : ಅಂಚೆಯ ಸ್ವೀಕೃತಿ ಪತ್ರ

3. <u>ಆರೋಪಿ ಪರ ಸಾಕ್ಷಿದಾರರ ಪಟ್ಟಿ</u>

-ಇಲ್ಲಾ-

4. <u>ಆರೋಪಿ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ</u>

-ಇಲ್ಲಾ-

(ವಿಜಯಕುಮಾರ ಎಮ್ ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು ಮುಧೋಳ.

VIJAYAKUMAR KANNUR

Digitally signed by VIJAYAKUMAR KANNUR
Date: 2026.03.07 10:53:37 +0530